RNU AIR DHARWAD

AUGUST 21, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

**ಕೇಂದ್ರ ಗೃಹ ಸಚಿವಾಲಯ,** ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ www.cybercrime.gov.in ಮತ್ತು ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಖ್ಯೆ 1–9–3–0 ಆರಂಭಿಸಿದೆ. ಆನ್ಲೈನ್ ಹಣಕಾಸು ವಂಚನೆ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಕ್ಷಣ ದಾಖಲಿಸಲು, ಅನುವು ಮಾಡುತ್ತದೆ.

<><><>

**ರಾಜ್ಯ ಮಟ್ಟದ ಡಿಜಿಟಲ್ ಸಾಕ್ಷರತಾ** ಕಾರ್ಯಕ್ರಮ ಹಾಗೂ ಸೈಬರ್ ಜಾಗೃತಿ ಅಭಿಯಾನ, ಸೆನ್ ಪೊಲೀಸ್ ಠಾಣೆಗಳ ಮೂಲಕ, ಜಾರಿಯಲ್ಲಿದೆ.

<><><>

**ದೇಶದ ವಿವಿಧ ಬಂದರುಗಳಲ್ಲಿ,** 2020 ರಿಂದ 2024ರ ವರೆಗೆ, 11 ಸಾವಿರದ 130 ಕೋಟಿ ರೂಪಾಯಿ ಮೌಲ್ಯದ ಮಾದಕ ವಸ್ತುಗಳನ್ನು, ವಶ ಪಡಿಸಿಕೊಳ್ಳಲಾಗಿದೆ ಎಂದು, ಕೇಂದ್ರ ಸರ್ಕಾರ ತಿಳಿಸಿದೆ.

<><><>

**ಕಳೆದ 2023 ರಲ್ಲಿ,** 22 ಸಾವಿರದ 253 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿದ್ದು, ಸಾವಿರದ ಇನ್ನೂರಾ 87 ಕೋಟಿ, 50 ಲಕ್ಷದ 89 ಸಾವಿರದ 854 ರೂಪಾಯಿ ಮೊತ್ತದ ವಂಚನೆಯಾಗಿದೆ.

<><><>

**ಪ್ರಸಕ್ತ ಜುಲೈ ಅಂತ್ಯದ ವರೆಗೆ,** 8 ಸಾವಿರದ 6 ನೂರಾ 20 ಪ್ರಕರಣಗಳು ವರದಿಯಾಗಿದ್ದು, 861 ಕೋಟಿ 14 ಲಕ್ಷದ 2 ಸಾವಿರದ 4 ನೂರಾ 76 ರೂಪಾಯಿಗಳಷ್ಟು ವಂಚನೆ ಪ್ರಕರಣ ದಾಖಲಾಗಿವೆ ಎಂದು, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾಕ್ಟರ್ ಎಂ.ಎ. ಸಲೀಂ, ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ, ಸ್ಪಷ್ಟ ಪಡಿಸಿದ್ದಾರೆ.

<><><>

**ಮಕ್ಕಳು ತಮ್ಮ ತಾಯಂದಿರು** ಹಾಗೂ ಭೂಮಿ ತಾಯಿಯ ಗೌರವಾರ್ಥ, ಸಸಿಗಳನ್ನು ನೆಟ್ಟು ಪೋಷಿಸಲು, ಸಾರ್ವಜನಿಕ ಶಿಕ್ಷಣ ಇಲಾಖೆ, ಏಕ್ ಪೇಡ್ ಮಾ ಕೇ ನಾಮ್, 2ನೇ ಆವೃತ್ತಿಯ ಅಭಿಯಾನ ಆರಂಭಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ ಈ ಯೋಜನೆಗೆ, ಮಕ್ಕಳಿಂದ ಉತ್ತಮ ಸ್ಪಂದನೆ ದೊರೆತಿದೆ. ರಾಜ್ಯದ 24 ಸಾವಿರದ 4 ನೂರಾ 77 ಶಾಲೆಗಳಲ್ಲಿ, 3 ಲಕ್ಷದ 64 ಸಾವಿರದ 401 ಸಸಿಗಳನ್ನು ನೆಟ್ಟು, ಪೋಷಿಸುತ್ತಿದ್ದಾರೆ.

<><><>

**ಗಾನ ವಿದುಷಿ, ಗಂಗೂಬಾಯಿ ಹಾನಗಲ್** ಸ್ಮಾರಕ, ವಸ್ತು ಸಂಗ್ರಹಾಲಯ, ಧಾರವಾಡದ ಹೊಸಯಲ್ಲಾಪುರ ಬಳಿಯ, 'ಗಂಗೋತ್ರಿ' ಗೆ, ಜಿಲ್ಲಾಧಿಕಾರಿ ದಿವ್ಯಾ ಪ್ರಭು ನೀಡಿ, ಸ್ಥಳೀಯರು, ಜನಪ್ರತಿನಿಧಿಗಳು ಹಾಗೂ ಸಂಗೀತಾಸಕ್ತರೊಂದಿಗೆ ಚರ್ಚಿಸಿದರು. ಶಿಥಿಲಾವಸ್ಥೆಯಲ್ಲಿರುವ, ವಸ್ತು ಸಂಗ್ರಹಾಲಯವನ್ನು, ಪುನರುಜ್ಜೀವಿತ ಗೊಳಿಸಲು, ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು, ಜಿಲ್ಲಾಧಿಕಾರಿ ಭರವಸೆ ನೀಡಿದ್ದಾಗಿ, ಹಿರಿಯ ಸಾಮಾಜಿಕ ಕಾರ್ಯಕರ್ತ, ಉದಯ ಯಂಡಿಗೇರಿ, ಮಾಹಿತಿ ನೀಡಿದ್ದಾರೆ.

<><><>

**ನೂತನ ಜೈವಿಕ ಇಂಧನ ನೀತಿಯನ್ನು,** ಶೀಘ್ರ ರಾಜ್ಯ ಸರ್ಕಾರ ಘೋಷಿಸಲಿದೆ ಎಂದು, ಜೈವಿಕ ಮಂಡಳಿ ರಾಜ್ಯಾಧ್ಯಕ್ಷ ಈ.ಎಸ್. ಸುಧೀಂದ್ರ ತಿಳಿಸಿದ್ದಾರೆ. ಗದಗ ಜಿಲ್ಲೆ, ನಾಗಾವಿಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯದಲ್ಲಿ, ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ವತಿಯಿಂದ, ವಿಶ್ವ ಜೈವಿಕ ಇಂಧನ ದಿನಾಚರಣೆ ಜರುಗಿತು.

ಸದ್ಭಾವನಾ ದಿವಸ್ ಹಾಗೂ ಊರ್ಜಾ ದಿವಸ್, ಎರಡೂ ಒಂದೇ ನಾಣ್ಯದ ಮುಖಗಳು. ರಾಷ್ಟ್ರೀಯ ಏಕತೆ, ಸಾಮಾಜಿಕ ಸೌಹಾರ್ದತೆ ಮತ್ತು ಸಹಿಷ್ಣುತೆಯ ಜೊತೆಗೆ, ಯುವಜನರಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ಬಗ್ಗೆ, ಜಾಗ್ರತಿ ಮೂಡಿಸುವ ಉದ್ದೇಶ ಹೊಂದಲಾಗಿದೆ ಎಂದರು.

<><><>

**ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕಿನ,** ಪ್ರವಾಹ ಬಾಧಿತ, ಮಿರ್ಜಿ ಗ್ರಾಮದ 12 ಕುಟುಂಬಗಳ 62 ಜನ ಸಂತ್ರಸ್ಥರನ್ನು, ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಿ, ಆರೈಕೆ ಮಾಡಲಾಗುತ್ತಿದೆ ಎಂದು, ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ. ಜಿಲ್ಲೆಯ ನದಿಗಳಾದ, ಕೃಷ್ಣ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳ, ನೀರಿನ ಮಟ್ಟ ಹೆಚ್ಚಿದ್ದು, ಪ್ರವಾಹ ಪರಿಸ್ಥಿತಿ ಉಂಟಾದ ಹಿನ್ನೆಲೆ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ, ಗ್ರಾಮಸ್ಥರಲ್ಲಿ ತಾಲೂಕಾಡಳಿತ ಮನವಿ ಮಾಡಿದೆ. ಮುಂಜಾಗ್ರತೆ ವಹಿಸುವ ನಿಟ್ಟಿನಲ್ಲಿ, ಮಿರ್ಜಿ ಗ್ರಾಮದಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ.

<><><>

**ವಿಜಯನಗರ ಜಿಲ್ಲೆಯ,** ತುಂಗಭದ್ರಾ ಜಲಾಶಯದ, ಅಚ್ಚುಕಟ್ಟು ಪ್ರದೇಶದಲ್ಲಿ, ಭಾರಿ ಮಳೆ ಹಿನ್ನೆಲೆ, ಕಳೆದ 24 ಗಂಟೆಗಳಲ್ಲಿ, ಅಣೆಕಟ್ಟೆಗೆ, ಒಂದು ಲಕ್ಷದ 28 ಸಾವಿರ ಕ್ಯೂಸೆಕ್ ಅಡಿಗಳಷ್ಟು ನೀರು, ಹರಿದು ಬಂದಿದೆ. ಇಂದು ತುಂಗಭದ್ರಾ ಜಲಾಶಯದಿಂದ, 1 ಲಕ್ಷದ 28 ಕ್ಯೂಸೆಕ್ ಅಡಿಗಳಿಗಿಂತ, ಅಧಿಕ ಪ್ರಮಾಣದ ನೀರನ್ನು ಹೊರ ಬಿಡಲಾಗಿದೆ. ಹಂಪಿಯ ಪುರಂದರ ಮಂಟಪ, ಸ್ನಾನಘಟ್ಟ, ಸಾಲು

ಮಂಟಪಗಳು, ಕೋದಂಡರಾಮ ದೇವಸ್ಥಾನ ಸೇರಿದಂತೆ, ಹಂಪಿಯ ಬಹುತೇಕ ಐತಿಹಾಸಿಕ ಸ್ಮಾರಕಗಳು, ಮುಳುಗಿವೆ. ನದಿ ಪಾತ್ರದ ಜನ, ಸೂಕ್ತ ಮುಂಜಾಗ್ರತೆ ವಹಿಸುವಂತೆ, ತುಂಗಭದ್ರಾ ಜಲ ಮಂಡಳಿ, ಕೋರಿದೆ.

<><><>

**ಮಹಾರಾಷ್ಟ್ರ ರಾಜ್ಯದ,** ಪುಣೆಯ ಛತ್ರಪತಿ ಶಿವಾಜಿ ಶೂಟಿಂಗ್ ರೇಂಜ್‌ನಲ್ಲಿ, 8 ದಿನಗಳ ಕಾಲ ನಡೆದ, ನಿನ್ನೆ ಸಂಪನ್ನಗೊಂಡ ಇಂಡಿಯನ್ ಓಪನ್ ಪ್ಯಾರಾ ಶೂಟಿಂಗ್ ಚಾಂಪಿಯನ್‌ಶಿಪ್ ನಲ್ಲಿ, ಹುಬ್ಬಳ್ಳಿಯ ಶೂಟಿಂಗ್ ಅಕಾದೆಮಿ ಪ್ಯಾರಾ ಶೂಟರ್ಸ್ ಉತ್ತಮ ಸಾಧನೆ, ಮಾಡಿದ್ದಾರೆ.

**ಪ್ಯಾರಾ ಶೂಟರ್ಸ್ ರಾಕೇಶ ನಿಡಗುಂದಿ ಒಂದು ಚಿನ್ನ,** ಎರಡು ಬೆಳ್ಳಿ ಪದಕ ಹಾಗೂ ಸಚಿನ ಸಿದ್ದಣ್ಣವರ ಕಂಚಿನ ಪದಕ ಗಳಿಸಿದ್ದಾರೆ.

**ಮಾಜಿ ಸೈನಿಕ ಮತ್ತು ರಾಷ್ಟ್ರ ಮಟ್ಟದ** ಶೂಟರ್ ರವಿಚಂದ್ರ ಬಾಲೇಹೊಸೂರ ಬಳಿ, ಇಬ್ಬರೂ ತರಬೇತಿ ಪಡೆಯುತ್ತಿದ್ದಾರೆ.

<><><>

**'ಜನಸ್ನೇಹಿ ಜಿಲ್ಲಾಡಳಿತ'** ಅಭಿಯಾನದ ಹಿನ್ನೆಲೆ, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಇಂದು ಅಳ್ನಾವರ ತಾಲೂಕಿನ, ತೆಹಸೀಲ್ದಾರ ಕಚೇರಿಯಲ್ಲಿ, ಮಧ್ಯಾಹ್ನ 1 ಗಂಟೆಯ ವರೆಗೆ, ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಬಳಿಕ, ಹೂಲಿಕೆರೆಯ ಇಂದಿರಮ್ಮನ ಕೆರೆಗೆ ಭೇಟಿ ನೀಡಿ, ಪರಿಶೀಲಿಸಲಿದ್ದಾರೆ.

<><><>

**ಧಾರವಾಡದ, ಕರ್ನಾಟಕ ವಿದ್ಯಾವರ್ಧಕ** ಸಂಘದಲ್ಲಿ, ಇಂದು ಸಂಜೆ 6 ಗಂಟೆಗೆ, ಸಾವಿರದ ಹಾಡುಗಳ ಸರದಾರ, ಹುಕ್ಕೇರಿ ಬಾಳಪ್ಪ ದತ್ತಿ ಅಡಿ, ಜಾನಪದ ಕಲಾವಿದ ಇಮಾಮ್‌ಸಾಬ್ ಒಲ್ಲೆಪನವರ ಹಾಗೂ ಸಂಗಡಿಗರು, ಜಾನಪದ ಗೀತ ಗಾಯನ ಕಾರ್ಯಕ್ರಮ, ಪ್ರಸ್ತುತ ಪಡಿಸಲಿದ್ದಾರೆ. ದತ್ತಿ ದಾನಿ ಅಂದಾನೆಪ್ಪ ಬಾಳಪ್ಪ ಹುಕ್ಕೇರಿ, ಅತಿಥಿಗಳಾಗ ಪಾಲ್ಗೊಳ್ಳಲಿದ್ದಾರೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**